


ರಾಜಶೇಖರ ನೀರಮಾನ್ವಿ (ನಿಧನ: ಆಗಸ್ಟ್ 8, 2024) ಕನ್ನಡ ಕಥಾಲೋಕಕ್ಕೆ ರಾಯಚೂರು ಸೀಮೆ ನೀಡಿದ ಶ್ರೇಷ್ಠ ಕಥೆಗಾರರಲ್ಲೊಬ್ಬರು. ಮಾನ್ವಿ ತಾಲೂಕಿನ ನೀರಮಾನ್ವಿ ಗ್ರಾಮದವರು. ಧಾರವಾಡ ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ. ಅನ್ವಯಿಕ ಭೂವಿಜ್ಞಾನ ಪದವಿ ಹಾಗೂ ಆರ್ಥಿಕ ಭೂವಿಜ್ಞಾನ ವಿಷಯದಲ್ಲಿ ಪಿ.ಎಚ್‌ಡಿ. ಪದವಿ ಪಡೆದಿದ್ದರು. ಮಾನ್ವಿ ಪಟ್ಟಣದ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯ, ಬಳ್ಳಾರಿಯ ವೀರಶೈವ ಮಹಾ ವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದ್ದರು. 'ಹಂಗಿನರಮನೆಯ ಹೊರಗೆ' ಹಾಗೂ 'ಕರ್ಪೂರದ ಕಾಯದಲ್ಲಿ' ಅವರ ಪ್ರಸಿದ್ಧ ಕಥಾಸಂಕಲನಗಳು. 'ಭೂತ' ಪ್ರಕಟಿತ ನಾಟಕ. ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಗಳು ನೀರಮಾನ್ವಿ ಅವರಿಗೆ ಸಂದಿವೆ.

ವ್ಯಕ್ತಿ ಏಕಾಂಗಿಯಾಗುತ್ತಾನೆ; ಹತಾಶನಾಗುತ್ತಾನೆ; ವಿಕ್ಷಿಪ್ತನಾಗುತ್ತಾನೆ; ಉಸಿರುಗಟ್ಟುವ ವಾತಾವರಣದಿಂದ ಹೊರಬರಲು ಹೆಣಗುತ್ತಾನೆ; ನಿಜವಾದ ವ್ಯಕ್ತಿಯಾಗಲು ಹೆಣಗುತ್ತಾನೆ; ಸಾಧ್ಯವಾಗದಿದ್ದರೆ ಸಾವಿಗೆ ಶರಣಾಗಲೂ ಹಿಂಜರಿಯುವುದಿಲ್ಲ. ಈ ಹಿನ್ನೆಲೆಯಿಂದ ರಾಜಶೇಖರ ನೀರಮಾನ್ವಿ ಕಥೆಗಳು ವ್ಯಕ್ತಿ ಪ್ರಜ್ಞೆ ಕೇಂದ್ರಿತ ನಿರೂಪಣೆ ಮತ್ತು ಸಮಾಜ ಪ್ರಜ್ಞೆ ಕೇಂದ್ರಿತ ನಿರೂಪಣೆ ಹೊಂದಿವೆ. ಮೊದಲ ಮತ್ತು ಎರಡನೆಯ ಆಯಾಮಗಳಿಗೆ ಅಸ್ತಿತ್ವವಾದವೇ ಕಾರಣ. ಲೋಹಿಯಾವಾದ, ಸಮಾಜವಾದ ಮತ್ತು ಮಾನವೀಯತೆಯ ಪ್ರಭಾವ ಈ ಕಥೆಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಇದು ಕಥೆಗಳ ಮಿತಿಯೂ, ಶಕ್ತಿಯೂ ಹೌದು.

'ವೃತ್ತ' ಕಥೆ ಶಂಕರಪ್ಪಗೌಡನ ಪ್ರಜ್ಞೆಯಲ್ಲಿ ಬಿಚ್ಚಿಕೊಳ್ಳುತ್ತ ಬೆಳೆಯುತ್ತದೆ. ಗೌಡ ಅನಿರೀಕ್ಷಿತವಾಗಿ ಸಾವಿಗೀಡಾಗುವ ಮುನ್ನಿನ ಎರಡು ದಿನಗಳ ಕಾಲಾವಧಿಯಲ್ಲಿ ತನ್ನ ಬದುಕನ್ನು ಅವಲೋಕಿಸಿಕೊಳ್ಳತೊಡಗುತ್ತಾನೆ. ಈ ಅವಲೋಕನ ಸಹಜ ರೀತಿಯಲ್ಲಿ ನಡೆದಂತೆ ಕಂಡರೂ, ಮಗ ತಂದೊಡ್ಡುವ ಬಿಕ್ಕಟ್ಟುಗಳೇ ಕಾರಣವಾಗುತ್ತವೆ. ಗೌಡರ ಕೊನೆಗಾಲದಲ್ಲಿ ತನ್ನ ಜತೆಗಿರುವ ನಂಬಿಕೆಯ ಬಲಿಷ್ಠ ನಾಯಿ ನಸುಕಿನಲ್ಲಿ ಬೇರೆ ನಾಯಿಗಳ ದಾಳಿಗೆ ಸಿಕ್ಕು ಸಾವಿಗೀಡಾಗುತ್ತದೆ. ಕಥೆಯ ಶುರುವಿಗೆ ಕಾಣುವ ಈ ಘಟನೆ ಮುಂದಾಗುವ ದುರಂತಕ್ಕೆ ಸಂಕೇತದಂತೆ ನಿಲ್ಲುತ್ತದೆ. ಸತ್ತ ನಾಯಿಯನ್ನು ಗೌಡ ದುಃಖತಪ್ತನಾಗಿ ಮಣ್ಣು ಮಾಡಿಸುತ್ತಾನೆ. ಬದುಕಿನ ಅರ್ಥವನ್ನು ಅಲ್ಲಿಂದ ಶೋಧಿಸಲು ತೊಡಗುತ್ತಾನೆ. ಹೊಲಕ್ಕೆ, ಮನೆಗೆ ಚಲಿಸುತ್ತಲೇ ಗೌಡ ತನ್ನ ಬದುಕನ್ನು, ಬದುಕಿನ ಭಾಗವಾಗಿದ್ದ ಹೆಂಡತಿ ಪಾರ್ವತಿಯನ್ನು, ಮಗನನ್ನು ಮತ್ತು ಊರನ್ನು ಅವಲೋಕಿಸುತ್ತ, ಅಳೆಯುತ್ತ ಹೋಗುತ್ತಾನೆ. ತನ್ನ ಬಗ್ಗೆ ಅಹಂ ಬಂದಾಗ ಹೆಂಡತಿಯನ್ನು ನೆನೆದು ಆಕೆಯಿಂದಲೇ ತನಗೆ ಈ ಸಮಾಜದಲ್ಲಿ ಗೌರವ, ಸ್ಥಾನ ಎಂದು ಹೆಮ್ಮೆಪಡುತ್ತಾನೆ. ಆ ಹೆಮ್ಮೆ ತಾತ್ಕಾಲಿಕವಾಗುತ್ತದೆ; ಮಗನನ್ನು ಮತ್ತು ಊರನ್ನು ನೆನೆದು ಕುಸಿಯುತ್ತಾನೆ.

ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಮಗ ಗೌಡನ ಗೌರವಕ್ಕೆ ಧಕ್ಕೆ ತಂದಿರುತ್ತಾನೆ. ಗೌಡನ ಸಾವಿಗೂ ಮಗನೇ ಕಾರಣವಾಗುವುದು ಇಲ್ಲಿನ ದುರಂತ. ಗೌಡನು ಮನೆಯಿಂದ ಹೊಲಕ್ಕೆ ನಿಧಾನವಾಗಿ